# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 527 |
| 2 | ಸದಸ್ಯರ ಹೆಸರು | : | ಶ್ರೀ ಡಾ: ಕೆ. ಗೋವಿಂದರಾಜ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 22-12-2022 |
| 4 | ಉತ್ತರಿಸುವವರು | : | ಮುಖ್ಯಮಂತ್ರಿಗಳು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಬೆಂಗಳೂರು ನಗರದ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಇರುವ ಬೀದಿ ದೀಪಗಳ ಸಂಖ್ಯೆ ಅಂದಾಜು ಸರ್ಕಾರಕ್ಕೆ ಇದೆಯೇ: (ಹಾಗಿದ್ದಲ್ಲಿ, ವಲಯವಾರು ಪ್ರತ್ಯೇಕ ಮಾಹಿತಿ ಒದಗಿಸುವುದು)</td><td>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ವಿವಿಧ ವಲಯಗಳಲ್ಲಿ (ಎಸ್.ವಿ., ಎಲ್.ಇ.ಡಿ, ಮತ್ತು ಇತ್ಯಾದಿ) ಒಟ್ಟು 5,38,975 ಬೀದಿ ದೀಪಗಳಿವೆ. ವಲಯವಾರು ಮಾಹಿತಿಯನ್ನು <u>ಅನುಬಂಧ-1</u> ರಲ್ಲಿ ನೀಡಿದೆ.</td></tr>
<tr><td>ಆ</td><td>ಕಳೆದ 3 ವರ್ಷಗಳಲ್ಲಿ ಬೀದಿ ದೀಪಗಳ ನಿರ್ವಹಣೆಗೆ ಬೆಂಗಳೂರು ಮಹಾನಗರ ಪಾಲಿಕೆ ವ್ಯಹಿಸಿರುವ ಹಣವೆಷ್ಟು; ಇದರಲ್ಲಿ ಬೆಸ್ಕಾಂಗೆ ಪಾವತಿಸಿರುವ ಹಣವೆಷ್ಟು;</td><td>ಕಳೆದ 3 ವರ್ಷಗಳಲ್ಲಿ ಬೀದಿ ದೀಪಗಳ ನಿರ್ವಹಣೆಗೆ ವ್ಯಯಿಸಿರುವ ಹಣದ ವಿವರಗಳು ಈ ಕೆಳಕಂಡಂತಿದೆ.<br>
<table>
<tr><th>ಆರ್ಥಿಕ ವರ್ಷ</th><th>ಮೊತ್ತ ರೂ. ಲಕ್ಷಗಳಲ್ಲಿ</th></tr>
<tr><td>2019-20</td><td>4376.492</td></tr>
<tr><td>2020-21</td><td>4045.38</td></tr>
<tr><td>2021-22</td><td>4210.67</td></tr>
<tr><td>Total</td><td>12632.542</td></tr>
</table>
ಬೆಸ್ಕಾಂಗೆ ಪಾವತಿಸಿರುವ ಹಣದ ವಿವರಗಳು<br>
<table>
<tr><th>ಆರ್ಥಿಕ ವರ್ಷ</th><th>ಮೊತ್ತ ರೂ. ಲಕ್ಷಗಳಲ್ಲಿ</th></tr>
<tr><td>2019-20</td><td>24517.00</td></tr>
<tr><td>2020-21</td><td>27903.81</td></tr>
<tr><td>2021-22</td><td>18684.16</td></tr>
<tr><td>Total</td><td>71105.00</td></tr>
</table>
</td></tr>
<tr><td>ಇ</td><td>ಹಳೆಯ ಬೀದಿ ದೀಪಗಳನ್ನು ಎಲ್.ಇ.ಡಿ ಬಲ್ಬ್‌ಗಳಿಗೆ ಬದಲಿಸಿದ ಯೋಜನೆ ಜಾರಿಯಲ್ಲಿದೆಯೇ: ಹಾಗಿದ್ದಲ್ಲಿ, ಕಳೆದ 3 ವರ್ಷಗಳಲ್ಲಿ ಎಲ್.ಇ.ಡಿ ಬಲ್ಬ್‌ಗೆ ಬದಲಿಸಿದ ಸಂಖ್ಯೆ ಎಷ್ಟು;</td><td>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ 198 ವಾರ್ಡ್‌ಗಳಿನ ಹಳೆಯ ಬೀದಿ ದೀಪಗಳನ್ನು ಎಲ್.ಇ.ಡಿ ಬೀದಿ ದೀಪಗಳಿಗೆ ಬದಲಿಸುವ ಸಂಬಂಧ ಪಿ.ಪಿ.ಪಿ ಆಧಾರದ ಮೇಲೆ ಯೋಜನೆಯನ್ನು M/s. Consortium of Shapoorji Pallonji and Company Pvt. Limited, SMC Infrastructures Pvt. Ltd. and Samudra Electronic System Pvt. Ltd (Bangalore Streetlighting Pvt Ltd-BSPL) ರವರಿಗೆ ದಿನಾಂಕ: 01-03-2019 ರಂದು ವಹಿಸಲಾಗಿರುತ್ತದೆ.</td></tr>
</table>

| | | |
|---|---|---|
| | | ಈ ಯೋಜನೆಯ ಗುತ್ತಿಗೆ ಪಡೆದ ಸಂಸ್ಥೆಯಿಂದ ಅನುಷ್ಠಾನ ಪ್ರಗತಿ ಕುಂಠಿತ ಮತ್ತು ಒಪ್ಪಂದ ಬಾಧ್ಯತೆಯಾದ Financial Closure Activity ಕಾರ್ಯಗಳು ಕರಾರಿನಲ್ಲಿ ನಿಗದಿಪಡಿಸಿರುವ ಕಾಲಮಿತಿಯಲ್ಲಿ ಕೈಗೊಳ್ಳದೆ ವಿಳಂಬಗೊಂಡಿದ್ದು, ನಿರೀಕ್ಷಿತ ಪ್ರಗತಿಯನ್ನು ಸಾಧಿಸಿರದ ಹಿನ್ನಲೆಯಲ್ಲಿ, ಸದರಿ ಯೋಜನೆಯ ಗುತ್ತಿಗೆಯನ್ನು ದಿನಾಂಕ: 03-12-2021 ರಂದು ರದ್ದುಪಡಿಸಲಾಗಿರುತ್ತದೆ. ಸದರಿ ಗುತ್ತಿಗೆಯನ್ನು ರದ್ದುಪಡಿಸುವ ಪೂರ್ವದಲ್ಲಿ, ಸಂಸ್ಥೆಯು 4.75 ಲಕ್ಷ ಬೀದಿ ದೀಪಗಳ ಪೈಕಿ 9724 ಎಲ್.ಇ.ಡಿ. ಬೀದಿ ದೀಪಗಳನ್ನು ಮಾತ್ರ ಅಳವಡಿಸಿರುತ್ತಾರೆ. |
| ಈ | ಎಲ್.ಇ.ಡಿ ಬಲ್ಬ್‌ಗಳಿಗೆ ಬದಲಾಯಿಸುವ ಕಾರ್ಯವು ವಿಳಂಬವಾಗುತ್ತಿರುವುದರಿಂದ ವಿದ್ಯುತ್ ಉಳಿತಾಯದಲ್ಲಿ ಕೋಟ್ಯಾಂತರ ರೂಪಾಯಿಗಳು ನಷ್ಟವಾಗುತ್ತಿರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆಯೇ? (ಹಾಗಿದ್ದಲ್ಲಿ ಸಂಪೂರ್ಣ ವಿವರಗಳನ್ನು ಒದಗಿಸುವುದು) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ 2019 ರಲ್ಲಿಯೇ ಹಳೆಯ ಬೀದಿ ದೀಪಗಳನ್ನು ಎಲ್.ಇ.ಡಿ ಬೀದಿ ದೀಪಗಳಿಗೆ ಪರಿವರ್ತಿಸುವ ಯೋಜನೆ ಅನುಷ್ಠಾನಗೊಳಿಸಲು ಕ್ರಮವಹಿಸಲಾಗಿತ್ತು. ಆದರೆ ಸದರಿ ಯೋಜನೆಯನ್ನು ಗುತ್ತಿಗೆ ಪಡೆದ ಸಂಸ್ಥೆಯು ನಿಗದಿತ ಕಾಲಾವಧಿಯಲ್ಲಿ ಕಾರ್ಯನಿರ್ವಹಿಸುವಲ್ಲಿ ವಿಫಲವಾಗಿರುತ್ತದೆ. ಆದ್ದರಿಂದ ಸದರಿ ಸಂಸ್ಥೆಯ ಗುತ್ತಿಗೆಯನ್ನು ರದ್ದುಪಡಿಸಿದ್ದು, ಪ್ರಸ್ತುತ ಪಾಲಿಕೆಯ ಸಾಂಪ್ರದಾಯಿಕ ಬೀದಿ ದೀಪಗಳನ್ನು ಎಲ್.ಇ.ಡಿ. ಬೀದಿ ದೀಪಗಳಿಗೆ ಪರಿವರ್ತಿಸಲು ಬೀದಿ ದೀಪಗಳ ಸಮೀಕ್ಷೆ ಕಾರ್ಯ, Presumptive Baseline ಲೆಕ್ಕಾಚಾರ ಮತ್ತು ಟೆಂಡರ್ ಡಾಕ್ಯೂಮೆಂಟ್ ಸಿದ್ಧಪಡಿಸುವಿಕೆ ಕಾರ್ಯಗಳನ್ನು ಕೈಗೊಳ್ಳಲು Transaction Advisor ಅನ್ನು ನೇಮಕ ಮಾಡಲಾಗಿದ್ದು, ಸಮೀಕ್ಷೆ ಕಾರ್ಯಗಳು ಪ್ರಗತಿಯಲ್ಲಿವೆ.<br><br>ಎಲ್.ಇ.ಡಿ ಬೀದಿ ದೀಪಗಳನ್ನು ಬದಲಿಸುವ ಕಾರ್ಯವನ್ನು ಪಿಪಿಪಿ ಆಧಾರದ ಮೇಲೆ ಅಥವಾ ಪಾಲಿಕೆಯ ವತಿಯಿಂದ ಸ್ವಯಂ ಸಂಗ್ರಹಣೆ ಆಧಾರದ ಮೇಲೆ ಕೈಗೊಳ್ಳುವ ಸಂಬಂಧ ಆದ್ಯತೆ ಮೇರೆಗೆ ಕ್ರಮವಹಿಸಲಾಗುತ್ತಿದೆ. |

**ಸಂಖ್ಯೆ: ನಅಇ 930 ಎಂಎನ್‌ವೈ 2022**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

ಅನುಬಂಧ - 1

# Zonewise details of the street lights

| Sl No | Zone | Total No of Lights | Remarks |
|---|---|---|---|
| 1 | East | 81486 | |
| 2 | West | 68228 | |
| 3 | South | 84032 | |
| 4 | Dasarahalli | 28191 | |
| 5 | Yelahanka | 53606 | |
| 6 | Bommanahalli | 61293 | |
| 7 | Mahadevapura | 82959 | |
| 8 | RR Nagar | 79180 | |
| 9 | Total | 538975 | |

ಅಧೀಕ್ಷಕ ಅಭಿಯಂತರರು ( ವಿದ್ಯುತ್)
(ಪೂರ್ವ, ಪಶ್ಚಿಮ, ಮಹದೇವಪುರ, ಯಲಹಂಕ)

ಅಧೀಕ್ಷಕ ಅಭಿಯಂತರರು ( ವಿದ್ಯುತ್)
(ದಾಸರಹಳ್ಳಿ, ದಕ್ಷಿಣ, ರಾರಾನಗರ ಬೊಮ್ಮನಹಳ್ಳಿ)